ಮಂಡ್ಯ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗವನ್ನು ತೆರೆಯುವುದು

292(728) - ಶ್ರೀ ಆತ್ಮಾನಂದ ಎಂ.ಎಸ್(ಮಂಡ್ಯ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗದ ಅವಶ್ಯಕತೆಯಿದ್ದು ಈ ಬಗೆಗೆ ಜನ ಪ್ರತಿನಿಧಿಗಳ ಹಾಗೂ ಸಾರ್ವಜನಿಕರ ಅಗ್ರಹ ಪೂರ್ವಕವಾದ ಮನವಿಯನ್ನು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ, ಈ ಬಗೆಗೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಬಿ. ರಮಾನಾಥ್ ರೈ (ಸಾರಿಗೆ ಸಚಿವರು):

ಅ) ಹೌದು.

ಆ) ಮಂಡ್ಯದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವಿಭಾಗೀಯ ಕಛೇರಿಯನ್ನು ಆದಷ್ಟು ಶೀಘ್ರದಲ್ಲಿಯೆ ಸ್ಥಾಪಿಸಲಾಗುತ್ತದೆ.

ಸೇಡಂ ತಾಲ್ಲೂಕಿನ ಸೆರಟ್ಲಾಪಂಡ ಕೆರೆಯ ಏರಿ ಬಿರುಕು ಬಿಟ್ಟಿರುವುದು

293(318) - ಶ್ರೀ ಬಸವಂತರೆಡ್ಡಿ ಮಾತಕಪಲ್ಲಿ (ಸೇಡಂ): ಮಾನ್ಯ ಗೃಹ ಮತ್ತು ಸಣಅಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ತೆಲಂಗಾಣ ಆಂಧ್ರ ಗಡೀಯಂಚಿನಲ್ಲಿರುವ ಸೇಡಂ ತಾಲ್ಲೂಕಿನ ಸೆರಟ್ಲಾಪಾಡ ಕೆರೆ ಪ್ರಾರಂಭವಾಗಿ 6-7 ವರ್ಷಗಳಾದರೂ ಸಹ ಪೂರ್ತಿಯಾಗದೇ ಇರುವ ಈ ಕೆರೆಯ ಏರಿ ಬಿರುಕು ಬಿಟ್ಟಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಕೆರೆ ದಿನಾಂಕ:31-3-2001 ರೊಳಗಾಗಿ ಮುಗಿಸಬೇಕಾಗಿದ್ದರೂ ಇಲ್ಲಿಯವರೆಗೆ ಪೂರ್ತಿಗೊಳಿಸಿಲ್ಲದಿರಲು ಕಾರಣವೇನು;

ಇ) ಸುಮಾರು ಒಂದು ಕೋಟಿ ಎಪ್ಪತ್ತು ಲಕ್ಷ ರೂ.ಗಳು ಖರ್ಚು ಮಾಡಿರುವ ಈ ಕೆರೆಯಿಂದ ರೈತರಿಗೆ ಪೂರ್ಣ ಪ್ರಮಾಣದಲ್ಲಿ ಪ್ರಯೋಜನವಾಗಲಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಇಂತಹ ಕಳಪೆ ಕಾಮಗಾರಿ ಮಾಡಿರುವ ಗುತ್ತಿಗೆದಾರರ ಮೇಲೆ ಕೈಗೊಂಡಿರುವ ಕ್ರಮವೇನು; ಇದರ ದುರಸ್ತಿ ಮತ್ತು ನಿರ್ಮಾಣ ಪೂರ್ತಿಗೊಳಿಸಿ ರೈತರಿಗೆ ಅನುಕೂಲ ಮಾಡುವುದು ಯಾವಾಗ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿಸಚಿವರು):

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಸೆರಟ್ಲಾಪಾಡ (ನರತಾಲಪಾಡ) ಸಣ್ಣ ನೀರಾವರಿ ಕೆರೆಯು ಏಪ್ರಿಲ್ 1998ರಲ್ಲಿ ಪ್ರಾರಂಭಗೊಳಿಸಿ ಡಿಸೆಂಬರ್ 01 ರ ಅಂತ್ಯದಲ್ಲಿ ಪೂರ್ಣಗೊಳಿಸಲಾಗಿದೆ. ಈ ಕೆರೆಯ ಏರಿಯ ಮೇಲೆ ಇಲ್ಲಿಯವರೆಗೂ ಯಾವುದೇ ರೀತಿಯ ಬಿರುಕು ಬಿಟ್ಟಿರುವುದಿಲ್ಲ.